ಬೆಂಗಳೂರು ನಗರದಲ್ಲಿ ಓಡಾಡುತ್ತಿರುವ ನಗರ ಸಾರಿಗೆ ಬಸ್ಸುಗಳು.

೨೧೫. ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದಲ್ಲಿ ಓಡಾಡುತ್ತಿರುವ ನಗರ ಸಾರಿಗೆ ಬಸ್ಸುಗಳ ಸಂಖ್ಯೆ ಎಷ್ಟು ?

ಆ) ದುರಸ್ತಿಯಲ್ಲಿರುವ ವಾಹನಗಳ ಸಂಖ್ಯೆ ಎಷ್ಟು ?

ಇ) ಬೇಡಿಕೆ ಪೂರೈಸಲು ಇನ್ನೂ ಬೇಕಾಗಿರುವ ಹೆಚ್ಚುವರಿ ವಾಹನಗಳ ಸಂಖ್ಯೆ .

ಈ) ಈ ವಾಹನಗಳನ್ನು ಯಾವಾಗ ಖರೀದಿಸಲಾಗುವುದು ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು).—

ಅ) ದಿನಾಂಕ ೧೦-೩-೧೯೯೦ ರಂದು ೧೬೩೦ ವಾಹನ ಬಲವನ್ನು ಹೊಂದಿದೆ.

ಆ) ೬೯ ವಾಹನಗಳು.

ಇ) ಪ್ರಸ್ತುತ ೧೬೩೦ ವಾಹನಗಳು ಸಾಕಷ್ಟು ಬೇಡಿಕೆಯನ್ನು ಪೂರೈಸುತ್ತಿವೆ.

ಈ) ಉದ್ಭವಿಸುವುದಿಲ್ಲ.

ಕರ್ನಾಟಕ ಶಿನೇ ಹಿಂದುಳಿದ ವರ್ಗಗಳ ಆಯೋಗದ ವರದಿಯ ಬಗ್ಗೆ

೨೧೪. ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಎ) ಜಸ್ಟಿಸ್ ಓ. ಚಿನ್ನಪ್ಪರೆಡ್ಡಿಯವರ ನೇತೃತ್ವದಲ್ಲಿ ರಚಿತವಾದ ಕರ್ನಾಟಕ ಮೂರನೇ ಹಿಂದುಳಿದ ವರ್ಗಗಳ ಆಯೋಗವು ತನ್ನ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿರುತ್ತದೆಯೇ ?

ಬಿ) ಒಪ್ಪಿಸಿದ್ದರೆ ಸರ್ಕಾರವು ಈ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಲು ತೆಗೆದುಕೊಂಡ ಕ್ರಮ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಸಚಿವರು).—

ಎ) ಇಲ್ಲ.

ಬಿ) ಉದ್ಭವಿಸುವುದಿಲ್ಲ.

ಅಧ್ಯಕ್ಷರು.—ಲಿಖಿತ ಉತ್ತರಗಳನ್ನು ಮಂಡಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

೧೯೮೯-೯೦ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜುಗಳ (ಎರಡನೆಯ ಕಂತು) ಮಂಡನೆ

ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸಿನ ಸಚಿವರು).—ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ ೨೧೫ (೧)ನೇ ಅನುಚ್ಛೇದದ ಮೇರೆಗೆ ೧೯೮೯-೯೦ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜುಗಳ (ಎರಡನೇ ಕಂತು) ಬಗ್ಗೆ ಪ್ರಸ್ತಾವಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಗಿದೆ.

ಪಿ. ಯು. ಸಿ. ಪರೀಕ್ಷೆಯ ಪ್ರಶ್ನೆ ಪತ್ರಿಕೆ ಪರೀಕ್ಷೆಗೆ ಮುನ್ನ ಹೊರಬಿದ್ದಿರುವ ಬಗ್ಗೆ ಪ್ರಸ್ತಾಪ

ಶ್ರೀ ಪಿ. ಜಿ. ಆರ್. ಸಿಂಧ್ಯ —ಮಾನ್ಯ ಅಧ್ಯಕ್ಷರೆ, ನಾನು ಒಂದು ತೀರಾ ಗಹನವಾದ, ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರವನ್ನು ತಮ್ಮ ಅಪ್ಪಣೆ ಕೋರಿ ಸದನದಲ್ಲಿ ಪ್ರಸ್ತಾಪಿಸುವುದಕ್ಕೆ

ಬಯಸುತ್ತೇನೆ. ಇವೊತ್ತು ಪತ್ರಿಕೆಗಳಲ್ಲಿ ಪಿ ಯು. ಸಿ. ಪ್ರಶ್ನೆಪತ್ರಿಕೆ ಲೀಕ್‌ಔಟ್ ಆಗಿದೆ, ಬೆಂಗಳೂರಿನಲ್ಲಿ ೧೫ ರೂಪಾಯಿಗಳಿಗೆ ಮಾರಾಟವಾಗಿದೆ ಎಂಬ ವರದಿ ಬಂದಿದೆ. ಈ ಬಗ್ಗೆ ನಾನು ವಿದ್ಯಾ ಸಚಿವರ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ೧೫ ರೂಪಾಯಿಗೆ ೨೫ ರೂಪಾಯಿಗೆ ಪ್ರಶ್ನೆಪತ್ರಿಕೆಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಎಲ್ಲಾ ಪತ್ರಿಕೆಗಳ ಮುಖಪುಟದಲ್ಲಿ ಪ್ರಕಟಣೆ ಯಾಗಿರತಕ್ಕದ್ದು ತಮ್ಮ ಗಮನಕ್ಕೂ ಬಂದಿರಲಿಕ್ಕೆ ಸಾಕು. ಪಿ. ಯು. ಸಿ. ಶಿಕ್ಷಣ ಮಂಡಳಿಯ...

ಅಧ್ಯಕ್ಷರು.—ನಿಮ್ಮ ಸೂಚನೆಯನ್ನು ನಾನು ನೋಡಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ —ಶಾಸ್ತ್ರ ಶಿಕ್ಷಣ ಸಚಿವರು ಸಭೆಯಲ್ಲಿರುವುದರಿಂದ ಅವರ ಗಮನ ಸೆಳೆಯುವುದಕ್ಕೆ ತಾವು ದಯವಿಟ್ಟು ಆನುಮತಿ ಕೊಡಬೇಕು. ರಾಜ್ಯದಲ್ಲಿ ಪರೀಕ್ಷೆಗಳು ನಡೆಯುತ್ತಿದೆ. ಇವೊತ್ತು ಈ ರೀತಿ ಆಗಿರುವುದರಿಂದ ಪರೀಕ್ಷೆಗಳನ್ನು ಮುಂದೆ ನಡೆಸುತ್ತಾರೆಯೇ ? ಈಗಾಗಲೇ ಎರಡು ಮೂರು ಪ್ರಶ್ನೆಪತ್ರಿಕೆಗಳು ಲೀಕ್‌ಔಟ್ ಆಗಿವೆ, ಮಾರಾಟವಾಗಿವೆ. ಕೆಲವು ಕಡೆ ಸಿಕ್ಕಿದೆ, ಕೆಲವು ಕಡೆ ಸಿಕ್ಕಿಲ್ಲ ಎಂದು ಹೇಳುತ್ತಿದ್ದಾರೆ. ಇದರಿಂದ ಪೋಷಕರು ಚಿಂತಾಕ್ರಾಂತರಾಗಿದ್ದಾರೆ. ಶಿಕ್ಷಣ ಸಚಿವರು ಇಲ್ಲಿರುವುದರಿಂದ ಅವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದನ್ನು ಹೇಳಬೇಕು; ಲೀಕಾಟ್ ಆಗಿರುವುದಕ್ಕೆ ಕಾರಣ ಏನು ? ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದು ಕೊಂಡಿದ್ದಾರೆಯೇ ? ಅಥವಾ ಕ್ರಮ ತೆಗೆದುಕೊಳ್ಳುತ್ತಾರೆಯೇ ? ಮತ್ತೆ ಸಿ. ಓ. ಡಿ.ಗೆ ರೆಫರ್ ಮಾಡಬಹುದೆಂದು ಪತ್ರಿಕೆಯಲ್ಲಿ ಬಂದಿದೆ. ಸಿ. ಓ. ಡಿ. ಗೆ ರೆಫರ್ ಮಾಡುವುದರಿಂದ ಯಾವುದೇ ಉಪಯೋಗ ಆಗುವುದಿಲ್ಲ. ಶಿಕ್ಷಣ ಸಚಿವರು ಏನು ಯೋಜನೆ ಮಾಡಿದ್ದಾರೆ ಇದರ ಬಗ್ಗೆ ಎಂಬುದನ್ನು ಹೇಳಬೇಕು. ಇದರ ಬಗ್ಗೆ ಒಂದು ಸ್ಪಷ್ಟೀಕರಣೆ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಾಟಾಳ್ ನಾಗರಾಜ್.—ಅಧ್ಯಕ್ಷರೇ, ಬೀದಿ ಬೀದಿಗಳಲ್ಲಿ, ಕಾಲೇಜುಗಳ ಮುಂದೆ ಮಾರಾಟ ವಾಗುತ್ತಿದೆ ಪ್ರಶ್ನೆಪತ್ರಿಕೆಗಳು.

ಶ್ರೀ ಶಿವಾನಂದ ಎಚ್. ಕೌಜಲಗಿ.—ಇದರ ಬಗ್ಗೆ ವಿದ್ಯಾರ್ಥಿಗಳಲ್ಲಿ ಕಳವಳ ಉಂಟಾಗಿದೆ. ನಿನ್ನೆ ದಿವಸ ಸ್ಕೂಲೀಸರಿಗೆ ಮಂತ್ರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಪ್ರಶ್ನೆಪತ್ರಿಕೆಗಳನ್ನು ಕಳುಹಿಸಿದ್ದರೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಆದ್ದರಿಂದ ಸರ್ಕಾರದವರು ಯಾವ ಕ್ರಮ ತೆಗೆದು ಕೊಳ್ಳುತ್ತಾರೆ ಎಂಬುದನ್ನು ಹೇಳಬೇಕು.

ಶ್ರೀ ಪಾಟಾಳ್ ನಾಗರಾಜ್.—ಇವತ್ತಿನ ಪರೀಕ್ಷೆಯನ್ನು ಮುಂದೂಡುತ್ತಾರೆಯೇ ಎಂಬುದನ್ನು ಹೇಳಬೇಕು. ಏಕೆಂದರೆ ಇದು ಬಹಳ ಗಂಭೀರವಾದ ವಿಚಾರ. ಇಡೀ ರಾಜ್ಯದಲ್ಲಿ ಎಲ್ಲಾ ಕಾಲೇಜು ಗಳು ವ್ಯಾಪಾರ ಕೇಂದ್ರವಾಗಿವೆ. ಪ್ರಶ್ನೆಪತ್ರಿಕೆ ಮಾರಾಟವಾಗುತ್ತಿದೆ.

ಶ್ರೀ ಕೆ. ಎಚ್. ರಂಗನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ನಾನೂ ಈ ದಿವಸ ಪತ್ರಿಕೆಯಲ್ಲಿ ಬೆಳಿಗ್ಗೆ ಓದಿದ್ದೇನೆ. ನಿನ್ನೆ ಸದನ ಇತ್ತು. ಬೇಗ್ಗೆ ೯ ಗಂಟೆಗೆ ಪರೀಕ್ಷೆ ಪ್ರಾರಂಭವಾಗಿದೆ. ಆ ಪ್ರಶ್ನೆಪತ್ರಿಕೆ ೮ ಗಂಟೆ ೫೦ ನಿಮಿಷಕ್ಕೆ ಹೊರಬಿದ್ದಿದೆ ಎಂದು ಪತ್ರಿಕೆಯಲ್ಲಿ ವರದಿ ಯಾಗಿದೆ. ಅಂದರೆ ಪರೀಕ್ಷೆ ಪ್ರಾರಂಭವಾಗುವ ೧೦ ನಿಮಿಷ ಮೊದಲು ಹೊರಬಿದ್ದಿದೆ. ಆದರೆ ಇಂಡಿಯನ್ ಎಕ್ಸ್‌ಪ್ರೆಸ್ ಕನ್ನಡಪ್ರಭ ಪತ್ರಿಕೆಯನ್ನು ಓದಿದಾಗ ಕೆಲವು ಉಪಾಧ್ಯಾಯರು ಸಿಂಡಿಕೇಟ್ ತರಹ ಮಾಡಿಕೊಂಡು ೧೦-೧೫ ರೂಪಾಯಿಗೆ ಮಾರಾಟ ಮಾಡುತ್ತಿದ್ದರು ಎಂದು ಬಂದಿದೆ. ನಾನು ಡೈರೆಕ್ಟರ್ ಜೊತೆಮಾತ ನಾಡಿದ್ದೇನೆ. ಇದರ ಬಗ್ಗೆ ಪರೀಕ್ಷೆ ಮಾಡಿಸಬೇಕಾಗುತ್ತದೆ ಓದಿದ ಹುಡುಗರಿಗೆ ತೊಂದರೆಯಾಗುವುದಲ್ಲದೆ ಓದದೇ ಇರತಕ್ಕ ವರಿಗೆ ಇದರ ಲಾಭ ಆಗತಕ್ಕದ್ದು ಸರಿಯಲ್ಲ. ಮೇಲ್ನೋಟಕ್ಕೆ ಲಿಖಿತ ಮೂಲಕ ವಿಷಯ ಪ್ರಸ್ತಾಪ ಮಾಡಿದ್ದಾರೆ. ಈಬಗ್ಗೆ ಪರಿಶೀಲನೆ ಮಾಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೇವೆ. ಆದರೆ ಪತ್ರಿಕೆಯಲ್ಲಿ ವರದಿಯಾಗಿರತಕ್ಕದ್ದು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಹುಡುಗರು ಇದನ್ನು ಸರ್ಕಾರಿ ಅಧಿಕಾರಿಗಳ ಗಮನಕ್ಕೆ ತಂದರು ಎಂದು. ಅದೇನು ಎಂದು ಕೂಲಂಕಷವಾಗಿ ವಿಚಾರ ಮಾಡಿ ವಿದ್ಯಾರ್ಥಿಗಳಿಗೆ ತೊಂದರೆಯಾಗುವ ರೀತಿಯಲ್ಲಿ ನಡೆದಿರುವುದ ಕಂಡುಬಂದರೆ ಈ ವಿಷಯದ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹಿಂದೆ ಮುಂದೆ ನೋಡಂವುದಿಲ್ಲ.

ಆದರ ಬಗ್ಗೆ ಇವತ್ತು ಪೂರ್ಣ ಪರಿಶೀಲನೆ ಮಾಡಬೇಕಾಗುತ್ತದೆ. ಒಂದೊಂದು ಸಾರಿ ಅಲ್ಲೊಂದು ಇಲ್ಲೊಂದು ಪ್ರಶ್ನೆಗಳನ್ನು ಗೆಸ್ ಮಾಡಿ ಅದನ್ನು ೧೦ ರೂಪಾಯಿ ೧೫ ರೂಪಾಯಿಗೆ ಹೆಚ್ಚುವುದೂ ಉಂಟು. ಇಂತಹ ದೊಡ್ಡ ನಗರದಲ್ಲಿ ಇಂತಹದ್ದೆಲ್ಲಾ ಆಗುತ್ತದೆ. ಇವತ್ತು ಯಾರೇ ಆಗಲಿ ೧೦ ರೂಪಾಯಿ ೧೫ ರೂಪಾಯಿ ಎಂದರೆ ಎಂತಹದ್ದು ಆಗುತ್ತದೆ? ಇಲ್ಲಿ ದೊಡ್ಡ ಅಪರಾಧ ವಾಗಿದ್ದರೆ ಸರ್ಕಾರ ಪರೀಕ್ಷೆಯನ್ನು ಮುಂದೆ ಹಾಕಿ ಮತ್ತೆ ಪರೀಕ್ಷೆ ಮಾಡುವುದಕ್ಕೆ ಹಿಂದಮುಂದು ನೋಡುವುದಿಲ್ಲ. ಈ ಬಗ್ಗೆ ವಿಚಾರಣೆ ಮಾಡುವ ವಿದ್ಯಾಧಿಕಾರಿಗಳು ಪ್ರಾಮಾಣಿಕ ರೀತಿಯಲ್ಲಿ ಕೆಲಸ

ಮಾಡುವಂತಹ ಅಧಿಕಾರಿಗಳಾಗಿದ್ದಾರೆ. ಈಗ ಏನು ಆಗಿದೆ ಎಂದರೆ, ಪತ್ರಿಕೆಗಳನ್ನು ಹೊರಗಡೆಗೆ ಕಳುಹಿಸುತ್ತಾರೆ. ಹೊರಗಿನ ಕಾಲೇಜಿನ ಪ್ರಶ್ನೆ ಪತ್ರಿಕೆಗಳನ್ನು ಟೈಜರಿಗಳಲ್ಲಿ ಇಟ್ಟಿರುತ್ತಾರೆ. ಇವುಗಳ ಬಗ್ಗೆ ಬೇರೆ ಬೇರೆ ಹಂತದಲ್ಲಿ ಮೇಲ್ವಿಚಾರಣೆ ನಡೆಯುತ್ತದೆ. ಒಂದು ವೇಳೆ ಇಂತಹ ಸಮಯದಲ್ಲಿ ಏನಾದರೂ ಬಹಿರಂಗ ಆಗಿದೆಯೇ ಎಂದು ಪರಿಶೀಲನೆ ಮಾಡುವುದಕ್ಕೂ ಪ್ರಯತ್ನ ಮಾಡುತ್ತಿದ್ದೇವೆ. ಮತ್ತೆ ಅಧಿಕಾರಿಗಳು ಈಗಾಗಲೇ ಪೋಲೀಸಿನವರನ್ನೂ ಸಂಪರ್ಕಿಸಿದ್ದು ನಗರ ಪೋಲೀಸ್ ಕಮಿಷನರ್ ರವರೂ ಕೂಡಾ ಈ ಬಗ್ಗೆ ವಿಷಯ ತಿಳಿದುಕೊಳ್ಳುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ —ಇವತ್ತು ಪೋಲೀಸಿನವರಿಗೆ ಕಂಪ್ಲೇಂಟ್ ಕೊಟ್ಟರೆ ಆವರಿಂದ ಅದನ್ನು ತೆಗೆದುಕೊಳ್ಳುವುದೇ ಇಲ್ಲ. ಪ್ರಶ್ನೆ ಪತ್ರಿಕೆ ಸಾಯಂಕಾಲ ೫೦೦ ರೂಪಾಯಿಗೆ, ಸಂಜೆ ೬ ಗಂಟೆಗೆ ೩೦೦ ರೂಪಾಯಿಗೆ, ೭ ಗಂಟೆಗೆ ೨೦೦ ರೂಪಾಯಿಗೆ. ರಾತ್ರಿ ೮ ಗಂಟೆ ನಂತರ ೧೦೦ ರೂಪಾಯಿಗಳಿಗೆ ಮಾರಾಟವಾಗಿವೆ. ಇಷ್ಟೆಲ್ಲಾ ಆದರೂ ತಾವು ಹೀಗೆ ಹೇಳುತ್ತಿದ್ದೀರಿ.

ಶ್ರೀ ಕೆ. ಹೆಚ್. ರಂಗನಾಥ್.—ಪತ್ರಿಕೆಯಲ್ಲಿ ವರದಿ ಆಗಿರುವುದನ್ನು ನೋಡಿ ಸ್ವಾಮಿ, ಬೆಂಗಳೂರಿನಲ್ಲಿ ಈ ರೀತಿಯ ಊಹಾಪೋಹಗಳು ಸಾಕಷ್ಟು ಬರುತ್ತವೆ. ಬಹಿರಂಗಗೊಂಡಿರುವುದು ನಿಜವಾಗಿದ್ದರೆ ನಾವು ಪರೀಕ್ಷೆಗಳನ್ನು ಮುಂದೆ ಹಾಕಬೇಕಾಗುತ್ತದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಕೇಳಿದ ೯೦ರಷ್ಟು ಪ್ರಶ್ನೆಗಳು ಇವತ್ತು ಬಹಿರಂಗಗೊಂಡಿವೆ. ತಕ್ಷಣ ಏಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬಾರದು ? ಬಹಿರಂಗಗೊಂಡಿರುವ ಪ್ರಶ್ನೆಪತ್ರಿಕೆಗಳನ್ನು ಅವರು ತಂದುಕೊಟ್ಟಿದ್ದಾರೆ. ಇವತ್ತು ಒಬ್ಬರಿಗೆ ಸಸ್ಪೆಂಡ್ ಮಾಡಿದರೆ ಬೇರೆ ಯವರಿಗೂ ಕೂಡಾ ಭಯ ಬರುತ್ತದೆ. ಈ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ತಾವು ಇದಕ್ಕೆ ಸಂಬಂಧಪಟ್ಟ ಅಧಿಕಾರಿಯನ್ನು ಸಸ್ಪೆಂಡ್ ಮಾಡಿ.

ಶ್ರೀ ಕೆ. ಹೆಚ್. ರಂಗನಾಥ್.—ಸರ್ಕಾರ ಈ ವಿಚಾರದಲ್ಲಿ ಯಾರ ಮುಲಾಜಿಗೂ ಒಳಗಾಗುವುದಿಲ್ಲ. ಅಪರಾಧ ಆಗಿದ್ದರೆ ಯಾರೇ ತಪ್ಪಿತಸ್ಥರು ಇರಲಿ ಅವರ ಮೇಲೆ ಕ್ರಮವನ್ನು ನಿರ್ದಾಕ್ಷಿಣ್ಯವಾಗಿ ತೆಗೆದು ಕೊಳ್ಳುತ್ತೇವೆ. ಇವತ್ತು ಪ್ರಶ್ನೆ ಪತ್ರಿಕೆಯ ಗೌಪ್ಯತೆ ಕಾಪಾಡುವ ಅಧಿಕಾರಿಗಳು ಇಂತಹವರಲ್ಲಿ ಒಳಗಾಗಿದ್ದಾರೋ ಇಲ್ಲವೋ ಎಂಬುದನ್ನು ನೋಡಿ ಅವರು ಒಳಗಾಗಿಲ್ಲದಿದ್ದರೆ ಅವರಿಗೆ ತೊಂದರೆ ಆಗದ ರೀತಿ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈಗ ನಿಜವಾಗಿಯೂ ಪ್ರಶ್ನೆಪತ್ರಿಕೆ ಬಹಿರಂಗವಾಗಿದೆ ಎಂಬುದು ದೃಢಪಟ್ಟರೆ ಪ್ರತ್ಯೇಕ ಪರೀಕ್ಷೆ ಮಾಡುವುದಕ್ಕೂ ಸರ್ಕಾರ ಹಿಂದೆಮುಂದೆ ನೋಡುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈಗ ಆಗಿರತಕ್ಕ ಪರೀಕ್ಷೆಯ ಪ್ರಶ್ನೆಪತ್ರಿಕೆ ಹೊರಬಿದ್ದಿದೆ. ಈ ಬಗ್ಗೆ ಇವೊತ್ತು ಸಾಯಂಕಾಲ ಅಥವಾ ನಾಳೆಯೊಳಗೆ ಒಂದು ನಿರ್ಧಾರ ಹೊರಬೀಳಬೇಕು. ಏಕೆಂದರೆ ಸ್ಟೂಡೆಂಟ್ಸ್ ಮತ್ತು ಅವರ ಪೇರೆಂಟ್ಸ್ anxiety ಯಿಂದ ಇದ್ದಾರೆ. ಈ ಬಗ್ಗೆ ತಾವು ನಾಳೆ ಒಳಗೆ ಇದನ್ನು ಪರಿಶೀಲನೆ ಮಾಡಿಸಬೇಕಾಗುತ್ತದೆ, ಇಲಾಖೆಯ ಮುಖ್ಯಸ್ಥರ ಮೇಲೆ ನಾನು ಯಾವ ದೋಷಾರೋಪಣೆಯನ್ನು ಮಾಡುವುದಿಲ್ಲ. ಅವರು ಸಭ್ಯ ಅಧಿಕಾರಿ ಇದ್ದಾರೆ. ಆದರೆ ಈ ಪ್ರಶ್ನೆ ಪತ್ರಿಕೆ ೮.೫೦ಕ್ಕೆ ಹೊರಬಿತ್ತೆಂದು ತಾವು ಹೇಳುತ್ತಿದ್ದೀರಿ.

ಶ್ರೀ ಕೆ. ಹೆಚ್. ರಂಗನಾಥ್.—ಪತ್ರಿಕಾ ವರದಿ ಪ್ರಕಾರ ನಾನು ಹೇಳುತ್ತಿದ್ದೇನೆ.

ಶ್ರೀ ಪಿ ಜಿ. ಆರ್. ಸಿಂಧ್ಯ.—ಹಿಂದಿನ ದಿವಸವೇ ಪತ್ರಿಕೆ ಸಿಕ್ಕಿತು ಎಂದು ಇನ್ನು ಕೆಲವರು ಹೇಳುತ್ತಾರೆ. ಹಾಗೆ ಆಗಿದೆ ಎಂದು ತಮಗೆ ಗೊತ್ತಾದರೆ ಮರು ಪರೀಕ್ಷೆ ಮಾಡುವುದಕ್ಕೆ ತಯಾರು ಇದ್ದೀರಾ? ಎರಡನೆಯದಾಗಿ, ಉಳಿದಿರತಕ್ಕ ಪರೀಕ್ಷೆಗಳು ಏನು ಇವೆ ಆ ಪರೀಕ್ಷೆಯ ಪ್ರಶ್ನೆಪತ್ರಿಕೆಗಳೂ ಲೀಕ್‌ಔಟ್ ಆಗುತ್ತವೆನ್ನುವ ಸುದ್ದಿ ಇದೆ. ಈ ಬಗ್ಗೆ ಗುಸುಗುಸು ಮಾತನಾಡುತ್ತಿದ್ದಾರೆ. ಇವರ ಬಗ್ಗೆಯೂ ಸೂಕ್ತ ಮುನ್ನೆಚ್ಚರಿಕೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮರುಪರೀಕ್ಷೆ ಮಾಡಿಸುವುದರ ಬಗ್ಗೆ ಸರ್ಕಾರ ಹಿಂದೆಮುಂದೆ ನೋಡುವುದಿಲ್ಲ. ವಿದ್ಯಾರ್ಥಿಗಳು ಇಡೀ ವರ್ಷ ಅಭ್ಯಾಸ ಮಾಡಿ ಪರೀಕ್ಷೆಗೆ ತಯಾರು ಆಗಿರುತ್ತಾರೆ. ಅಂತಹವರಿಗೆ ತೊಂದರೆ ಆಗದ ರೀತಿಯಲ್ಲಿ, ಪ್ರಶ್ನೆಪತ್ರಿಕೆ ಬಹಿರಂಗವಾಗಿರುವುದು ಸಾಬೀತು ಆದಲ್ಲಿ, ಮರುಪರೀಕ್ಷೆ ಮಾಡುವುದಕ್ಕೆ ಹಿಂದೆಮುಂದೆ ನೋಡುವುದಿಲ್ಲ. ತಾವು ಏನು ವಿಷಯ ಪ್ರಶ್ನೆಪತ್ರಿಕೆಗಳೂ ಬಹಿರಂಗಗೊಳ್ಳಬಹುದು ಎಂದಿದ್ದೀರೋ ಆ ಬಗ್ಗೆಯೂ ನಾವು ಮುನ್ನೆಚ್ಚರಿಕೆ ಹಾಸಿ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಈ ಬಗ್ಗೆ ಪೂರ್ಣ ಪ್ರಮಾಣದ ತನಿಖೆ ನಡೆಸುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಅಪರಾಧ ಆಗಿದೆ ಎಂದು ಕಂಡುಬಂದರೆ ತನಿಖೆ ಮಾಡಿಸುತ್ತೇನೆ. ಅದನ್ನು ಎಸ್‌ಕ್ವಾಯರಿ ಮಾಡಿಸಿ, ಅದು ಮೇಲ್ನೋಟಕ್ಕೆ ಸಾಬೀತು ಆದರೆ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.—ನಮ್ಮ ಕಡೆಯ ಜನರಿಗೆ ಯಾವುದೇ ಸವಲತ್ತು ಸಿಗುವುದಿಲ್ಲ. ಬೆಂಗಳೂರಿನಲ್ಲಿರುವವರು ಅವರ ಮಕ್ಕಳನ್ನು ಇಂಜಿನಿಯರ್ ಮತ್ತು ಡಾಕ್ಟರ್ ಓದಿಸಲಿಕ್ಕೆ ಸೀಟು ತೆಗೆದುಕೊಳ್ಳುತ್ತಾರೆ. ನಿಜವಾಗಿ ಓದಿದವರಿಗೆ ಯಾವುದೇ ಸವಲತ್ತುಗಳು ಸಿಗುವುದಿಲ್ಲ. ಯಾವುದೇ ಸೀಟು ಸಿಗುವುದಿಲ್ಲ.

ಶ್ರೀ ಜಿ. ರಾಜುಗೌಡ.—ಶೂನ್ಯವೇಳೆಯಲ್ಲಿ ಒಂದು ಗಹನವಾದ ವಿಷಯವನ್ನು... ...

ಅಧ್ಯಕ್ಷರು.—ಈ ಸಭೆಯಲ್ಲಿ ಶೂನ್ಯವೇಳೆಯೇ ಇಲ್ಲ, ಸಭೆ ಕಾರ್ಯಕಲಾಪದಿಂದ ತುಂಬಿದೆ.

ರಾಜ್ಯದ ರೈತರಿಗೆ ಬಡ್ಡಿ ಸಹಾಯಧನ ಒದಗಿಸಂವ ಬಗ್ಗೆ

ಶ್ರೀ ಜಿ. ರಾಜುಗೌಡ.—ನಿನ್ನೆತ್ತಿನ ಪ್ರಜಾವಾಣಿ ಪತ್ರಿಕೆಯಲ್ಲಿ ''ಆಪೆಕ್ಸ್ ಬ್ಯಾಂಕ್‌ಗೆ ನಬಾರ್ಡ್ ಪುನರ್‌ಧನ ನೀಡಿಕೆ ಮತ್ತೆ ಬಂದ್'' ಆಯಸ್ಯ ಪತ್ರದಲ್ಲಿ ''ರೈತರಿಗೆ ಬಡ್ಡಿ ಸಹಾಯಧನ'' ಆದರಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಪಡೆದುಕೊಂಡಿರುವ ಬೆಳೆ ಸಾಲಕ್ಕೆ ಸಂಬಂಧಿಸಿದಂತೆ ಬಡ್ಡಿ ಸಹಾಯಧನ ಒದಗಿಸುವ ಒಂದು ಹೊಸ ಯೋಜನೆಯನ್ನು ಜಾರಿಗೆ ತಂದು ಅದನ್ನು ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆಯೆಂದು ಹೇಳಲಾಗಿದೆ. ನಬಾರ್ಡ್‌ನವರು ಹಣ ಕೊಡದಿದ್ದರೆ ಸರ್ಕಾರ ಹಾಕಿಕೊಂಡಿರತಕ್ಕ ಯೋಜನೆಯನ್ನು ಕೈಬಿಡಲಾಗುವುದೆ? ಇದರಿಂದ ರಾಜ್ಯದ ರೈತರಿಗೆ ಅನ್ಯಾಯವಾಗುತ್ತದೆ. ಇದು ರಾಜ್ಯದ ರೈತರಿಗೆ ಅನ್ವಯವಾಗುತ್ತದೆಯೇ?

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೆ, ನಿನ್ನೆ ನಾವು ಸಾಲ್ಕೈದು ಜನ ಸದಸ್ಯರು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ, ನಬಾರ್ಡ್‌ನವರು ಸಾಲ ಕೊಡುವುದನ್ನು ಸ್ಟಾಪ್ ಮಾಡುತ್ತೇವೆಂದು ಸರ್ಕಾರಕ್ಕೆ ಪತ್ರ ಬರೆದಿದ್ದಾರೆಂದು ಗೊತ್ತಾಗಿದೆ. ಅದರ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ ನಬಾರ್ಡ್‌ನ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ನಾವು ಕಳುಹಿಸಿದ ನಿಲುವಳಿ ಸೂಚನೆಯನ್ನು ಕಾಲಿಂಗ್ ಅಟೆನ್‌ಷನ್ ಆಗಿ ಪರಿವರ್ತನೆ ಮಾಡಿದ್ದಾರೆಂದು ಗೊತ್ತಾಯಿತು.

ಅಧ್ಯಕ್ಷರು. ನಾನು ತಿಳಿದಿದ್ದ ನಿಲುವಳಿ ಸೂಚನೆಗಳನ್ನು ಕಳುಹಿಸುವುದು ವಿರೋಧ ಪಕ್ಷಗಳಿಗೆ ಸೇರಿದ್ದಾದು ಎಂದು. ಈಗ ಆಡಳಿತ ಪಕ್ಷದವರು ನಿಲುವಳಿ ಸೂಚನೆಗಳನ್ನು ಕಳುಹಿಸಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಾಲಿಂಗ್ ಅಟೆನ್‌ಷನ್ ಎಂದು ಕಳುಹಿಸಿದ್ದೇವೆ.

ಅಧ್ಯಕ್ಷರು.—ಮಾನ್ಯ ವೆಂಕಟಪ್ಪನವರು ನಿಲುವಳಿ ಸೂಚನೆ ಕಳುಹಿಸಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ನಮ್ಮ ಕಡೆಯ ಸದಸ್ಯರುಗಳನ್ನು ಕರೆಯಿಸಿಕೊಂಡು ಮಾನ್ಯ ಹೆಗಡೆಯವರು ಮಾತನಾಡಿಕೊಂಡು ಕಳಿಸಿದ್ದಾರೆ. ಅವರಿಗೆ ಪ್ಲಾನಿಂಗ್ ಕಮಿಷನ್‌ನಲ್ಲಿ ಬೇಕಾದಷ್ಟು ಕೆಲಸವಿದೆ. ಅವರಿಗೆ ಅಲ್ಲಿ ಫುಲ್‌ಟೈಮ್ ಕೆಲಸವಿದೆ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ, ಪಶ್ಚಿಮಬಂಗಾಳದಿಂದ ಗುಜರಾತ್‌ನವರೆಗೆ ಎಲ್ಲಾ ಸ್ಟೇಟ್‌ಗಳನ್ನು ನೋಡಿಕೊಂಡು ಹೋಗುವುದು ಬಿಟ್ಟು, ಇಲ್ಲಿ ರಾಜ್ಯಸಭೆ ಚುನಾವಣೆ ಬಂದಿದೆಯೆಂದು ಬಂದು ಸರಿಯಾಗಿ ಇಲ್ಲಿ ಕುಳಿತು ಒಬ್ಬೊಬ್ಬರನ್ನು ಕರೆಯಿಸಿ ಮಾತನಾಡುತ್ತಿದ್ದಾರೆ. ಇಲ್ಲಿಗೆ ಸುಮಾರು ೨೫ ಜನ ಆಯಿತು. ಈಗ ಸೀಟು ಬದಲಾಯಿಸುತ್ತಾ ಇದ್ದಾರೆ. ಜಯವಿಟ್ಟು ಅವರನ್ನು ಆ ಕೆಲಸಕ್ಕೆ ಹೋಗಿಯೆಂದು ಹೇಳಿದರೆ ಚೆನ್ನಾಗಿರುತ್ತದೆ.

ಶ್ರೀ ವಾಟಾಳ್ ನಾಗರಾಜ್.—೧೮೭ ಜನ ಶಾಸಕರು ನಿಮ್ಮಲ್ಲಿರುವಾಗ ನಿಮಗೆ ಭಯ ಏತಕ್ಕೆ ಬರಬೇಕು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮಗೆ ಭಯವಿಲ್ಲ. ಆದರೆ ಕಾನ್ಸಿಪ್ಟಿರೆಸಿ ಆಗಬಾರದಂ.

ಶ್ರೀ ವಾಟಾಳ್ ನಾಗರಾಜ್.—ನಿಮಗೆ ಭಯ ಬಂದಿದೆ. ಬಾರೀ ಭಯ ಆಗಿದೆ ತಮ್ಮಲ್ಲಿ ಬಹುತೇಕ ಬದಲಾವಣೆಯಾಗಬಹುದು. ರಾಜ್ಯಸಭಾ ಚುನಾವಣೆಯಲ್ಲಿ ಬದಲಾವಣೆಯಾಗಬಹುದು.